ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

KARNATAKA ELECTRICITY REGULATORY COMMISSION

ಕ.ವಿ.ನಿ.ಆ. | K.E.R.C.

6 ಮತ್ತು 7ನೇ ಮಹಡಿ, ಮಹಾಲಕ್ಷ್ಮೀ ಛೇಂಬರ್ಸ್
ನಂ. 9/2, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು - 560 001

6th & 7th Floor, Mahalaxmi Chambers
No. 9/2, M.G. Road, Bangalore-560 001

IW - 23526
28/3/15

ಕವಿನಿಆ/ಡಿ/135/2014-15
ಅಡಕ: 3 ಪುಟ

ದಿನಾಂಕ: 18.03.2015

ಶ್ರೀ ದಯಾನಂದ ಎಸ್.ಪಾಟೀಲ,
ಪ್ರಥಮದರ್ಜೆ ಗುತ್ತಿಗೆದಾರರು,
ಕೊಣ್ಣೂರ, ಗೋಕಾಕ ತಾಲ್ಲೂಕು,
ಬೆಳಗಾವಿ ಜಿಲ್ಲೆ.

ಮಾನ್ಯರೆ,

GM D(T)

M. D. HESCOM. 24/3

ವಿಷಯ: ಗ್ರಾಮಾಂತರ ಪ್ರದೇಶದ ಕೃಷಿ ಜಮೀನಿನಲ್ಲಿ ತೋಟದ ಮನೆಗಳಿಗೆ ವಿದ್ಯುತ್ ಪೂರೈಸಲು ಹೆಸ್ಕಾಂ ವಿಧಿಸುತ್ತಿರುವ ಅಭಿವೃದ್ಧಿ ಶುಲ್ಕದ ಬಗ್ಗೆ ಸ್ಪಷ್ಟೀಕರಣ ಕೋರಿ ತಾವು ಆಯೋಗಕ್ಕೆ ಬರೆದಿರುವ ದಿನಾಂಕ: 23.02.2015ರ ಪತ್ರ ಕುರಿತು.

*************

ಮೇಲ್ಕಂಡ ವಿಷಯದ ಬಗ್ಗೆ, ತಮಗೆ ತಿಳಿಸಬಯಸುವುದೇನೆಂದರೆ, ತಾವು ದಿನಾಂಕ: 12.02.2015ರಂದು ಧಾರವಾಡ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ, ವಿದ್ಯುಚ್ಛಕ್ತಿ ದರ ಪರಿಷ್ಕರಣೆ ಸಂಬಂಧ ನಡೆದ ಸಾರ್ವಜನಿಕ ವಿಚಾರಣೆ ಸಂದರ್ಭದಲ್ಲಿ, ಗ್ರಾಮೀಣ ಪ್ರದೇಶದ ತೋಟದ ಮನೆಗಳಿಗೆ ವಿದ್ಯುತ್ ಪೂರೈಸಲು ಹೆಸ್ಕಾಂ ವಿಧಿಸುತ್ತಿರುವ ಅಭಿವೃದ್ಧಿ ಶುಲ್ಕದ ಬಗ್ಗೆ ಪ್ರಸ್ತಾಪಿಸಿದಾಗ, ಸಂಬಂಧಿಸಿದ ವಿದ್ಯುಚ್ಛಕ್ತಿ ಸರಬರಾಜು ವಿನಿಯಮಗಳ ಪ್ರಕಾರ ವಿದ್ಯುತ್ ಮಾರ್ಗ / ಘಟಕ ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ವಿದ್ಯುತ್ ಸರಬರಾಜು ಕಂಪನಿಗಳು ಸಂದಾಯಿಸಿಕೊಂಡು ವಿದ್ಯುತ್ ಸರಬರಾಜನ್ನು ಒದಗಿಸಲಾಗುತ್ತಿದೆ ಎಂದು ಆಯೋಗವು ತಮಗೆ ಮನವರಿಕೆ ಮಾಡಿಕೊಟ್ಟದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಆದಾಗ್ಯೂ, ತಾವು ಇದರ ಬಗ್ಗೆ ಲಿಖಿತ ಸ್ಪಷ್ಟೀಕರಣ ಕೋರಿರುವುದರಿಂದ, ಈ ಕೆಳಗಿನಂತೆ ಸ್ಪಷ್ಟೀಕರಣ ನೀಡಲು ಆಯೋಗದಿಂದ ನಿರ್ದೇಶಿಸಲ್ಪಟ್ಟಿದ್ದೇನೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜಿನ ವೆಚ್ಚದ ವಸೂಲಾತಿ) ವಿನಿಯಮಗಳು, 2004ರ ಉಪಖಂಡ 3.2.3(iv)ರಡಿಯಲ್ಲಿ ಅಭಿವೃದ್ಧಿದಾರರು ಅಭಿವೃದ್ಧಿಪಡಿಸದೆ ಬಿಟ್ಟುಹೋದ ಪರಿತ್ಯಕ್ತ ಬಡಾವಣೆಗಳ (Abandoned layout) ಹೊರತಾಗಿ, ಹಳ್ಳಿ ಹಾಗೂ ನಗರ ಪಂಚಾಯಿತಿ ಮಿತಿಯ ಹೊರಗಿರುವ ನಿವೇಶನಗಳಿಗೆ, ಕಂದಾಯ ನಿವೇಶನಗಳಿಗೆ, ಸ್ಟ್ರೇ ನಿವೇಶನಗಳಿಗೆ (Stray sites), ಮತ್ತಿತರೆ ನಿವೇಶನಗಳಿಗೆ ಪ್ರತಿ ನಿವೇಶನಕ್ಕೆ ಕನಿಷ್ಠ 3000/- ರೂಪಾಯಿ ಮಿತಿಗೊಳಪಟ್ಟು ಕೋರಿದ ಪ್ರತಿ ಕಿ.ವ್ಯಾ. ವಿದ್ಯುತ್ ಲೋಡಿಗೆ ವಿದ್ಯುತ್ ಮಾರ್ಗ / ಘಟಕದ ವೆಚ್ಚದ ಬಾಬ್ತು 3000/- ರೂಪಾಯಿಗಳನ್ನು ವಸೂಲು ಮಾಡತಕ್ಕದ್ದು ಎಂಬುದನ್ನು ಸ್ಪಷ್ಟವಾಗಿ ಹೇಳಲಾಗಿರುತ್ತದೆ (ಸದರಿ ವಿನಿಯಮದ ಪ್ರತಿಯನ್ನು ಲಗತ್ತಿಸಲಾಗಿದೆ). ಆದ್ದರಿಂದ, ತಾವು ತಿಳಿಸಿರುವಂತೆ ಕೃಷಿ ಜಮೀನಿನ ನಿವೇಶನದಲ್ಲಿ ಕಟ್ಟಲಾಗಿರುವ ತೋಟದ ಮನೆಗಳು ಈ ಮೇಲಿನ ವಿನಿಯಮದಲ್ಲಿ ನಿಗದಿ ಮಾಡಿದಂತೆ ಹಳ್ಳಿ ಮಿತಿಯ ಹೊರಗೆ ಬರುವ ಕಾರಣದಿಂದ, ವಿದ್ಯುತ್ ಸರಬರಾಜು ಲೈಸೆನ್ಸಿಗಳು ವಿದ್ಯುತ್ ಪೂರೈಸಲು ಈ ಮೇಲಿನ ವಿನಿಯಮದಂತೆ ವಿದ್ಯುತ್ ಮಾರ್ಗ / ಘಟಕದ ನಿರ್ಮಾಣದ ವೆಚ್ಚದ ಬಾಬ್ತು ಪ್ರತಿ ಕಿ.ವ್ಯಾ. ವಿದ್ಯುತ್ ಲೋಡಿಗೆ 3000/- ರೂಪಾಯಿಗಳನ್ನು ವಸೂಲಿ ಮಾಡುತ್ತಿರುವುದು ಸರಿಯಾಗಿರುತ್ತದೆ.

ವಂದನೆಗಳೊಂದಿಗೆ,

EERA
Pl. place on website | Copy to CEE BGM | HBL

ತಮ್ಮ ವಿಶ್ವಾಸಿ,

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ಕಾರ್ಯದರ್ಶಿ

31/3

AEERA

6/4/15

ಪ್ರತಿ:

ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಪಿ.ಬಿ. ರಸ್ತೆ, ನವನಗರ, ಹುಬ್ಬಳ್ಳಿ – 580 025ರವರಿಗೆ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.